ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ
(ಆರ್ ಪಿ ಸಂಖ್ಯೆ57)
ನಮೂನೆ ಸಂಖ್ಯೆ4

ಸಿ ಆರ್ ಪಿ 67

ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸಿಂಧನೂರು

CC No.1684/2022 CW-14 PW-7

| | | |
|---|---|---|
| ಹೆಸರು | : | ಚಂದ್ರಪ್ಪ |
| ತಂದೆಯ/ಗಂಡನ ಹೆಸರು | : | ವೆಂಕಟೇಶ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಆರಕ್ಷಕ ನಿರೀಕ್ಷಕರು ಮತ್ತು ಬೆರಳು ಮುದ್ರೆ ತಜ್ಞ |
| ವಾಸಸ್ಥಳ | : | ಗದಗ |

ಸಾಕ್ಷಿಗೆ ಪ್ರಮಾಣ ವಚನ ಬೋದಿಸಿದ ದಿನಾಂಕಃ 07-11-2023

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದ

ದಿಃ 27-08-2014 ರಿಂದ ಇಲ್ಲಿಯವರೆಗೆ ರಾಯಚೂರು ಬೆರಳು ಮುದ್ರೆ ಘಟಕದ ಹೆಚ್ಚುವರಿ ಪ್ರಭಾರದಲ್ಲಿ ಇದ್ದೇನೆ.

ನಾನು ಕಳೆದ 12 ವರ್ಷಗಳಿಂದ ಕರ್ನಾಟಕ ರಾಜ್ಯ ಬೆರಳು ಮುದ್ರೆ ತಜ್ಞನಾಗಿ ಕೆಲಸ ಮಾಡುತಿತರುತ್ತೇನೆ. 2012 ನೇ ಸಾಲಿನಲ್ಲಿ ರಾಷ್ಟ್ರೀಯ ಬೆರಳು ಮುದ್ರೆ ಸಂಗ್ರಹಾಲಯ, ಭಾರತ ಸರ್ಕಾರದವರು ನಡೆಸುವ ಬೆರಳು ಮುದ್ರೆ ತಜ್ಞ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದೇನೆ.

ಸಿಂಧನೂರು ನಗರ ಪೋ.ಠಾಣೆಯ ಈ ಪ್ರಕರಣದಲ್ಲಿ ದಿಃ 30-12-2021 ರಂದು ಗುನ್ನಾ ಸ್ಥಳಕ್ಕೆ ಭೇಟಿ ನೀಡಿ ಪರೀಶೀಲಿಸುವಂತೆ, ರಾಯಚೂರು ಪೋಲೀಸ ನಿಯಂತ್ರಣಾ ಕೋಣೆಯಿಂದ ದೂರವಾಣಿ ಸಂದೇಶದ ಮೂಲಕ ರಾಯಚೂರು ಬೆರಳು ಮುದ್ರೆ ಘಟಕ ದ ಅಧಿಕಾರಿ ಮತ್ತು ಸಿಬ್ಬಂದಿಯರು ಮಧಾಹ್ನ 4-15 ಗಂಟೆಗೆ ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದಾರೆ.

ಘಟನಾ ಸ್ಥಳದಲ್ಲಿ ಎರಡು ಕಟ್ಟಿಗೆ ಬಾಗಿಲುಗಳು, ಎರಡು ಸ್ಟೀಲ್ ಅಲ್ಮೆರಾ, ನಾಲ್ಕು ಆಭರಣ ಡಬ್ಬಿಗಳನ್ನು ಸಿಲವರ್ ಪುಡಿಯಿಂದ ಪರೀಶೀಲಿಸಲಾಗಿ, ಒಂದು ಸ್ಟೀಲ್ ಅಲ್ಮೆರಾದ ಮೇಲೆ ಎರಡು ಆಕಸ್ಮಿಕ ಬೆರಳು ಮುದ್ರೆಗಳನ್ನು ಗುರುತಿಸಿರುತ್ತಾರೆ.

ಅಪರಾಧ ನಡೆದ ಸ್ಥಳದ ಪರೀಕ್ಷಾ ವರದಿಯನ್ನು ಸಿಂಧನೂರು ನಗರ ಪೋ.ಠಾಣೆಯವರಿಗೆ ದಿಃ 31-12-2021 ರಂದು ವರದಿ ನೀಡಿರುತ್ತೇನೆ.

ನಗರ ಪೋ.ಠಾಣೆಯ ಠಾಣಾಧಿಕಾರಿಗಳು ಘಟನೆ ನಡೆದ ಮನೆಯ ಒಬ್ಬರ ಮಾದರಿ ಬೆರಳುಮುದ್ರೆಯನ್ನು ಪಡೆದು ಕಳುಹಿಸಿದ್ದರು. ಪ್ರಶ್ನಿತ ಕ್ಯೂ-1 ಆಕಸ್ಮಿಕ ಬೆರಳು ಮುದ್ರೆ ಸಿಸಿ ನಂ. 1685/2022 ರಲ್ಲಿಯ ಸುನೀತಾ ಗಂಡ ಲಕ್ಷ್ಮಣ ಕುಮಾರ ರೆಡ್ಡಿ, ಪ್ರಶಾಂತ ನಗರ ಸಿಂಧನೂರು (ಚಾಸಾ-1) ಇವರ ಬಲಗೈ ತೋರುಬೆರಳಿಗೆ ಹೊಂದಾಣಿಕೆ ಆಗಿದೆ.

ಪ್ರಶ್ನಿತ ಕ್ಯೂ ಎಂಬ ಆಕಸ್ಮಿಕ ಬೆರಳು ಮುದ್ರೆಯನ್ನು ಕರ್ನಾಟಕ ರಾಜ್ಯ ಬೆರಳು ಮುಂದ್ರೆ ಸಂಗ್ರಹಾಲಯದ ಗಣಕಯಂತ್ರದ AFIS ತಂತ್ರಾಂಶದ ದತ್ತಾಂಶದಲ್ಲಿ ಅಳವಡಿಸಿ ಶೋಧನೆ ಮಾಡಿ ನೋಡಲಾಗಿ, ಸದರಿ ಪ್ರಶ್ನಿತ ಕ್ಯೂ ಆಕಸ್ಮಿಕ ಬೆರಳು ಮುದ್ರೆಯು ಬಳ್ಳಾರಿ ಜಿಲ್ಲೆಯ ಕೌಲ ಬಜಾರ ಪೋ.ಠಾಣೆಯ ಗುನ್ನಾ ನಂ.1/2017, ಪ್ರಕರಣದಲ್ಲಿಯ ಪೂರ್ವ ಬಂಧಿತನಾದ ಅನ್ವರ ಪಾಶಾ (1 ನೇ ಆರೋಪಿ) ಈತನ ಎಡಗೈ ಹೆಬ್ಬೆರಳು ಮುದ್ರೆಗೆ ಹೊಂದಾಣಿಕೆ ಆಗಿರುತ್ತದೆ. ಈ ಬಗ್ಗೆ ದಿನಾಂಕ 11-01-2022 ರಂದು ಪರೀಕ್ಷೋತ್ತರ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಸಾಕ್ಷಿಯು ಅದರ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-12 ಎಂದು ಗುರುತಿಸಲಾಯಿತು. ಅದೇರೀತಿ ದಿಃ 12-01-2022 ರಂದು ಆಕಸ್ಮಿಕ ಬೆರಳು ಮುದ್ರೆಯ ಅಂತಿಮ ಪ್ರಮಾಣ ಪತ್ರದೊಂದಿಗೆ 1 ನೇ ಆರೋಪಿಯ ಬೆರಳು ಮುದ್ರೆ ತಾಳೆ ಮಾಡಿದ ವರದಿಯನ್ನು ನೀಡಿರುತ್ತೇನೆ. ಅವುಗಳನ್ನು ನಿಪಿ-13 ಮತ್ತು 14 ಎಂದು ಗುರುತಿಸಲಾಯಿತು. ನಿಪಿ-14 ಕ್ಕೆ ಅನುಬಂಧ 2 ಮತ್ತು ಇನ್ನೊಂದು ಬೆರಳುಮುದ್ರೆ ಸಲ್ಲಿಸಿರುತ್ತೇನೆ. ಅವು ನಿಪಿ-14 ರ ಭಾಗವಾಗಿವೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ</u>

ನಾನು ಈ ಪ್ರಕರಣದಲ್ಲಿ ವೈಯಕ್ತಿಕವಾಗಿ ಬೆರಳು ಮುದ್ರೆ ಸಂಗ್ರಹಿಸಿಲ್ಲ ಎಂದರೆ ಸರಿ. ನಮ್ಮ ಸಿಬ್ಬಂದಿ ಮೂಲಕ ಸಂಗ್ರಹಿಸಿದ್ದೇನೆ ಸ್ಥಳದಲ್ಲಿ ಸಂಗ್ರಹಿಸಿದ ಬೆರಳು ಮುದ್ರೆಯ ವರದಿಯನ್ನು ತನಿಖಾಧಿಕಾರಿಗೆ ನೀಡಿಲ್ಲ ಎಂದರೆ ಸರಿ ಅಲ್ಲ. ನಿಪಿ-14 ರಲ್ಲಿ ಕಾಣಿಸಿರುವ ಎರಡು ಬೆರಳು ಮುದ್ರೆಗಳು ಸ್ಪಷ್ಟವಾಗಿ ರೇಖೆಗಳು ಕಾಣಿತ್ತಿಲ್ಲ ಎಂದರೆ ಸರಿ ಅಲ್ಲ. ಬೆರಳು ಮುದ್ರೆ ಪರೀಕ್ಷಿಸುವಾಗ ನಮ್ಮ ದತ್ತಾಂಶದಲ್ಲಿ ಸಂಗ್ರಹಿಸುತ್ತೇವೆ ಬೆರಳು ಮುದ್ರೆಯನ್ನು ಎನ್‌ಲಾರ್ಜ ಮಾಡಿ ಪರೀಕ್ಷಿಸಿದ ಬಗ್ಗೆ ಪೋಟೋಗಳನ್ನು ನೀಡಿಲ್ಲ ಎಂದರೆ ಸರಿ ಅಲ್ಲ. ನಿಪಿ-14 ರಲ್ಲಿರುವ ಎರಡು ಬೆರಳು ಮುದ್ರೆಗಳು ಒಂದಕ್ಕೊಂದು ಹೊಂದಾಣಿಕೆ ಇಲ್ಲದಿದ್ದರೂ ಸಹ ತನಿಖಾಧಿಕಾರಿ ಮಾತು ಕೇಳಿ ಸುಳ್ಳುವರದಿ ಮತ್ತು

ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸರಿ ಅಲ್ಲ ನಿಪಿ-14 ರಲ್ಲಿ ನಮೂದಿಸಿದ ಬೆರಳು ಮುದ್ರೆಗಳು 1 ನೇ ಆರೋಪಿಯ ಬರೆಳು ಮುದ್ರೆ ಅಲ್ಲ ಎಂದರೆ ಸರಿ ಅಲ್ಲ. ಅದೇರೀತಿ ನಿಪಿ-14 ಕ್ಕೆ ಲಗತ್ತಿಸಿದ ಬೆರಳು ಮುದ್ರೆಗಳು ಸಹ 1 ನೇ ಆರೋಪಿಗೆ ಸಂಬಂಧಿಸಿದ್ದು ಎಂದರೆ ಸರಿ ಅಲ್ಲ. ಅವುಗಳಲ್ಲಿ ಬೆರಳು ಮುದ್ರೆಕಾಣಿಸುತ್ತಿಲ್ಲ ಎಂದರೆ ಸರಿ ಅಲ್ಲ. ನಾನು ಯಾವುದೇ ಪರೀಕ್ಷೆ ಮಾಡಿ ಸುಳ್ಳು ದೂರಿಗೆ ಅನುಕೂಲವಾಗುವಂತೆ ಪ್ರಮಾಣ ಪತ್ರ ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.